Form No.4 (Civil)
Deposition
Sheets
(R.P.No.57)

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 3/2017

ಪ್ರಾ.ಸಾ. 1 ಚಾ.ಸಾ. 1

| | | |
|---|---|---|
| ಹೆಸರು | : | ಸಾಬಪ್ಪ |
| ತಂದೆಯ ಹೆಸರು | : | ಮಹಾದೇವಪ್ಪ ಕೊಂಕಲ್ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ | : | ಚಪೆಟ್ಲಾ |

**ಪ್ರಮಾಣ ವಚನ ಭೋಧಿಸಿದ ದಿನಾಂಕ: 29-05-2024**
**ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ**

ಚಾಸಾ-4 ಮಹಾದೇವಪ್ಪ ನನ್ನ ತಂದೆ. ಚಾಸಾ-5 ಮೊಗಲಪ್ಪ ನನ್ನ ಅಣ್ಣ. ಆರೋಪಿತರು ನನ್ನ ಸಂಬಂಧಿಕರು. ನಮ್ಮ ತಾತ ಮಾಶಪ್ಪ ಅವರಿಗೆ ಒಟ್ಟು 5 ಜನ ಗಂಡು ಮಕ್ಕಳಿದ್ದು ಮೊದಲನೇವಯರು ಸಾಬಣ್ಣ ಮೃತಪಟ್ಟು 30 ವರ್ಷಗಳಾಗಿವೆ. ನನ್ನ ತಾತಾ ಅಜ್ಜಿ ತೀರಿಕೊಂಡಿದ್ದಾರೆ. 2 ನೇ ಮಗ ಮಾಣಿಕಪ್ಪ, 3 ನೇ ಮಗ ಚಂದ್ರಪ್ಪ, 4 ನೇ ಮಹಾದೇವಪ್ಪ, 5 ನೇ ಸಿದ್ರಾಮಪ್ಪ. ಚಂದ್ರಪ್ಪ ಮಾತ್ರ ಅಕ್ಷರಸ್ತರಾಗಿದ್ದು ನೌಕರಿ ಮಾಡುತ್ತಿದ್ದಾರೆ. ಉಳಿದವರೆಲ್ಲರೂ ಅನಕ್ಷರಸ್ಥರು. ಚಪೆಟ್ಲಾ ಗ್ರಾಮದಲ್ಲಿ ನಮ್ಮದು ದೊಡ್ಡ ಮನೆ ಇದೆ. ಆ ಮನೆಯಲ್ಲಿ 3 ಬಾಗ ಮಾಡಿದ್ದಾರೆ ಒಂದರಲ್ಲಿ ನಾವು, ಇನ್ನೊಂದರಲ್ಲಿ ನಮ್ಮ ದೊಡಪ್ಪ ಚಂದ್ರಪ್ಪ ಇನ್ನೊಂದು ಮನೆಯಲ್ಲಿ ನಮ್ಮ ಚಿಕ್ಕಪ್ಪ ಸಿದ್ರಾಮಪ್ಪ ಅವರ ಕುಟುಂಬ ಇದೆ. ಆ ಮನೆಗೆ ಒಂದೆ ತಲಬಾಗಿಲು ಇದೆ. ಮನೆಯ ವಿಷಯವಾಗಿ ಸುಮಾರು 3 ವರ್ಷದಿಂದ ನಮ್ಮ ದೊಡ್ಡಪ್ಪ ಚಂದ್ರಪ್ಪ ನಮ್ಮನ್ನು ಮನೆ ಬಿಟ್ಟು ಹೋಗಿ ಹೊರಗೆ ಮನೆ ಮಾಡಿಕೊಳ್ಳಿ ಎಂದು ಒತ್ತಾಯ ಮಾಡುತ್ತಿದ್ದರು. ಆ 3 ವರ್ಷಗಳ ಕಾಲ ನಾವು ಯಾವುದೇ ತಕರಾರು ಮಾಡದೇ ಸರಿಪಡಿಸಿಕೊಂಡು ಹೋಗುತ್ತಿದ್ದೆವು. ಹೀಗಿದ್ದು ದಿನಾಂಕ: 05-06-2016 ರಂದು ಸಾಯಂಕಾಲ 7-00 ಗಂಟೆಗೆ ನಮ್ಮ ದೊಡ್ಡಪ್ಪ ಚಂದ್ರಪ್ಪ ಈತನು ಮನೆ ಬಿಟ್ಟು ಹೋಗಿ ಹೊರಗೆ ಮನೆ ಮಾಡಿಕೊಂಡು ಇರುವಂತೆ ತಕರಾರು ಮಾಡಿದರು. ಅದಕ್ಕೆ ನಮ್ಮ ತಂದೆ ಮಹಾದೇವಪ್ಪ ನಾವು ಖಾಸ ಅಣ್ಣ ತಮ್ಮಂದಿರು ಇದ್ದು ನಾವು ಎಲ್ಲಿಗೆ ಹೋಗಬೇಕು ಎಂದು ಕೇಳಿದ್ದಕ್ಕೆ ಜಗಳ ಮಾಡಿದರು. ನಾನು, ನನ್ನ ತಂದೆ ಮತ್ತು ನನ್ನ ಅಣ್ಣ ಜಗಳ ಆಗುತ್ತದೆ ಎಂದು

ತಿಳಿದು ಗುರುಮಠಕಲ್ ಪೊಲೀಸಠಾಣೆಗೆ ಹೋಗಿ ಪಿಎಸಐ ಅವರಿಗೆ ವಿಷಯವನ್ನು ತಿಳಿಸಿದ್ದು. ನಮ್ಮ ತಂಟೆಗೆ ಬಾರದಂತೆ ಅವರನ್ನು ಕರೆಯಿಸಿ ಬುದ್ದಿ ಹೇಳಿ ಎಂದು ಹೇಳಿದೆವು. ನಂತರ ನಾವು ತಂದಿದ್ದ ಮೋಟರ ಸೈಕಲ್ ಕೆಎ-33 ಎಸ್-5791 ರಾತ್ರಿ 10-50 ಗಂಟೆಗೆ ಗುರುಮಠಕಲ್ ದಿಂದ ಚಪೆಟ್ಲಾ ಮಾರ್ಗವಾಗಿ ನಾವು 3 ಜನ ಮೋಟರ ಸೈಕಲ್ ಮೇಲೆ ಬರುತ್ತಿದ್ದಾಗ ನಮ್ಮ ದೊಡ್ಡಪ್ಪ ಚಂದ್ರಪ್ಪ ಒಂದು ಕಮಾಂಡರ ಜೀಪನಲ್ಲಿ 5-6 ಜನರನ್ನು ಕರೆದುಕೊಂಡು ನಮ್ಮ ಮೋಟರಸೈಕಲಗೆ ಹಿಂಬಾಲಿಸಿದರು. ನಮ್ಮ ದೊಡ್ಡಪ್ಪ ಚಂದ್ರಪ್ಪ ಜೀಪನ ಫುಟ ರಿಸ್ಟಮೇಲೆ ಕಾಲುಗಳನ್ನು ಇಟ್ಟುಕೊಂಡು ಒಂದು ಕೈಯಿಂದ ಜೀಪ ಹಿಡಿದುಕೊಂಡು ಮತ್ತೊಂದು ಕೈಯಲ್ಲಿ ಬಡಿಗೆ ಹಿಡಿದುಕೊಂಡು ನಿಲ್ಲಿಸಿ ನಿಮ್ಮನ್ನು ಈ ದಿನ ಜೀವ ಸಹಿತ ಬಿಡುವದಿಲ್ಲ ಈ ಮಕ್ಕಳಿಗೆ ಬೆಡಬೇಡಿರಿ ಸಾಯಿಸಿ ಬಿಡಿರಿ ಎಂದು ಜೀಪನಲ್ಲಿ ಇದ್ದ ಚಾಲಕ ಅಂಜಪ್ಪ ಮತ್ತು ಇತರರಿಗೆ ಹೇಳುತ್ತಿದ್ದರು. ನಂತರ ನಾವು ಮೋಟರ ಸೈಕಲನಲ್ಲಿ ಹೋಗಿ ಚಪೆಟ್ಲಾ ಗ್ರಾಮದ ಬಸ್ ನಿಲ್ದಾಣದ ಹತ್ತಿರ ರಾತ್ರಿ 11-00 ಗಂಟೆಗೆ ಗಣೇಶ ಕುಡಿಸುವ ಸ್ಥಳದ ಹತ್ತಿರ ಜೀಪನ ಚಾಲಕ ತಾನು ನಡೆಸುತ್ತಿದ್ದ ಕಮಾಂಡರ ಜೀಪನ್ನು ತೆಗೆದುಕೊಂಡು ಬಂದು ನಾವು ಹೋಗುತ್ತಿದ್ದ ಮೋಟರ ಸೈಕಲಗೆ ಜೋರಾಗಿ ಢಿಕ್ಕಿ ಮಾಡಿದ. ನಾವು ಮೂರು ಜನ ಬೈಕನಿಂದ ಹಾಕಿ ಕೆಳಗೆ ಬಿದ್ದೆವು. ಆಗ ನನ್ನ ಎಡಕಾಲಿನ ಪಾದದ ಹತ್ತಿರ ಭಾರಿ ರಕ್ತದ ಗಾಯ ಆಯಿತು. ನನ್ನ ಎಡಗೈ ಮೊಣಕೈಗೆ ಭಾರಿ ರಕ್ತಗಾಯ ಆಗಿ ಮೂಳೆ ಮುರಿದಿತ್ತು. ನನ್ನ ಎಡ ಮೊಳಕಾಲಿಗೆ ರಕ್ತಗಾಯವಾಗಿತ್ತು. ನನ್ನ ಹಣೆಯ ಎಡಭಾಗಕ್ಕೆ ತರಚಿದ ಗಾಯವಾಗಿತ್ತು. ನನ್ನ ತಂದೆಗೆ ಎಡ ಕಾಲಿನ ಪಾದದ ಹತ್ತಿರ ತೀವ್ರ ಸ್ವರೂಪದ ರಕ್ತಗಾಯವಾಗಿತ್ತು. ಹಣೆಯ ಎಡಬಾಗಕ್ಕೆ ತಲೆ ಒಡೆದಿತ್ತು. ಎಡ ಮುಂಗೈ ಮುರಿತ್ತು. ನನ್ನ ಅಣ್ಣ ಮೊಗಲಪ್ಪನಿಗೆ ಎಡ ತೊಡೆಗೆ ಬಾರಿ ಗಾಯವಾಗಿ ರಕ್ತ ಸೋರುತ್ತಿತ್ತು. ಎಡಕಾಲಿನ ಪಾದದ ಹತ್ತಿರ ಮೂಳೆ ಮುರಿದಿತ್ತು. ಇದನ್ನು ನಮ್ಮ ಊರಿನವರಾದ ವೆಂಕಟಪ್ಪ ತಂದೆ ಅನಂತಪ್ಪ ಕೇಶ್ವರ, ಸಿದ್ದಪ್ಪ ತಂದೆ ಸಾಬಣ್ಣ ಅದಗಲ್, ನರಸಿಂಗ ತಂದೆ ಹುಸೇನಪ್ಪ ಅದಗಲ್, ಸಹಾದೇವಪ್ಪ ತಂದೆ ಮಾಸಪ್ಪ ಸಂಗಾ, ಮಾಸಮ್ಮ ಗಂಡ ಸಾಬಣ್ಣ ಇವರು ಬಂದು ನೋಡಿದ್ದು ಇರುತ್ತದೆ. ನಮ್ಮನ್ನು ಕೊಲೆ ಮಾಡುವ ಉದ್ದೇಶದಿಂದ ಕಮಾಂಡರ ಜೀಪನ್ನು ಬಳಸಿದ್ದು ಅದರ ನಂಬರ ನೋಡಲಾಗಿ ಎಪಿ-22 ಯು-3484 ಇತ್ತು. ನಮ್ಮ ದೊಡ್ಡಪ್ಪ ಚಂದ್ರಪ್ಪ ಈತನು ನೀವು ಮನೆಯಲ್ಲಿ ಇರಬೇಡರಿ ಬೇರೆ ಕಡೆ ಮನೆ ಮಾಡಿಕೊಂಡು ಇರಬೇಕು ಎಂದು ಮೇಲಿಂದ ಮೇಲೆ ತಕರಾರು ಮಾಡುತ್ತಿದ್ದರು.

2. ಆಗ ನಮ್ಮ ಊರಿನವರಾದ ವೆಂಕಟಪ್ಪ, ಸಹಾದೇವಪ್ಪ, ನರಸಿಂಗ, ಸಿದ್ದಪ್ಪ ಇವರು 108 ಅಂಬುಲೇನ್ಸಗೆ ಫೋನ್ ಮಾಡಿ ನಮ್ಮನ್ನು ಅಂಬುಲೇನ್ಸನಲ್ಲಿ ಹಾಕಿಕೊಂಡು ಗುರುಮಠಕಲ್ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿಗೆ ಪೊಲೀಸರು ಬಂದು ನಮ್ಮನ್ನು ವಿಚಾರಿಸಿದಾಗ ಈ ಬಗ್ಗೆ ದೂರನ್ನು ಕೊಟ್ಟಿದ್ದು ಅದನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು

ನಿ.ಪಿ.1(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು
ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ಮೋಟರ ಸೈಕಲ್ ಇರುವ 2 ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.2 ಮತ್ತು 3 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 2 ಬಡಿಗೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು.

ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.